**<u>ದಿನಾಂಕಃ03.12.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀಮತಿ. ವಿ.ಟಿ.ಜಿ., ವಕೀಲರಿಂದಃ-</u>**

ನನ್ನ ತಂದೆಗೆ ನಾನೂ ಸೇರಿ ಒಟ್ಟು 5 ಜನ ಮಕ್ಕಳು. ತಾವೇ ಹಾಜರುಪಡಿಸಿರುವ ನಿ.ಪಿ.2 ಪಂಚಾಯ್ತಿ ವಿಭಾಗ ಪತ್ರದಂತೆ ತಮ್ಮ ಸಹೋದರಿಯರಿಗೂ ಆಸ್ತಿಗಳಲ್ಲಿ ಭಾಗ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ, ನನ್ನ ಸಹೋದರಿಯರು ಆಸ್ತಿ ಬೇಡ ಎಂದು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ಸಹೋದರಿಯರು ತಮ್ಮ ತಂದೆ ಆಸ್ತಿಗಳಲ್ಲಿ ಭಾಗ ಬೇಡ ಎಂದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳಿದ್ದು ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿ.ಪಿ.2ರಲ್ಲಿ ತಮ್ಮ ಸಹೋದರಿಯರು ಒಟ್ಟು ಕುಟುಂಬದ ಆಸ್ತಿಗಳಲ್ಲಿ ಭಾಗ ಬೇಡ ಎಂದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತಾರೆಂದು ತಾವು ಹೇಳಿದ್ದು ಸದರಿ ವಿಚಾರವನ್ನು ನಿ.ಪಿ.2ರಲ್ಲಿ ಹೇಳಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿ.ಪಿ.4 ತಿಳುವಳಿಕೆ ಪತ್ರದ ಪುಟ 4ರಲ್ಲಿ ನೋಟೀಸ್ ತಲುಪಿದ 1 ವಾರದಲ್ಲಿ ಕುಟುಂಬದ ಎಲ್ಲಾ ಆಸ್ತಿಗಳನ್ನು ಕಾನೂನುಬದ್ದವಾಗಿ ಈಗಾಗಲೇ ಆಗಿರುವ ಪತ್ರದಂತೆ ವಿಭಾಗ ಮಾಡಿ ನನ್ನ ಕಕ್ಷಿದಾರರಿಗೆ ಸೇರಬೇಕಾದ ಹಿಸ್ಸೆಯನ್ನು ಕಂದಾಯ ಪಾವತಿಸಿ ಖಾತೆ ವರ್ಗಾಯಿಸಿಕೊಂಡು ಹೋಗಲು ಸಹಕರಿಸತಕ್ಕದ್ದು ತಪ್ಪಿದಲ್ಲಿ ನನ್ನ ಕಕ್ಷಿದಾರರು ತಮ್ಮಗಳ ವಿರುದ್ದ ದಾವೆ ಹೂಡಿ ವಿಭಾಗ ಪತ್ರದ ಅನ್ವಯದಂತೆ ಹಿಸ್ಸೆ ಪಡೆಯಲು ಸಿದ್ದರಿದ್ದಾರೆಂದು ವಕೀಲರ ಮೂಲಕ ನಾನು ನೋಟೀಸ್ ಕಳುಹಿಸಿದ್ದೇನೆ ಎಂದರೆ ಸರಿ. 2ನೇ ಪ್ರತಿವಾದಿಯು ತಮ್ಮ ವಕೀಲರ ಮೂಲಕ ಮರುತ್ತರ ನೋಟೀಸ್ ಕೊಡಿಸಿದ್ದು ಅದರಲ್ಲಿ ಹೊಸದಾಗಿ ವಿಭಾಗ ಪತ್ರ ಮಾಡಿ ಹಿಸ್ಸೆ ಹಂಚಿಕೊಡಲು ನನಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿಯನ್ನು ನಿ.ಪಿ.2 ವಿಭಾಗ ಪತ್ರಕ್ಕೆ ಪಕ್ಷಗಾರರನ್ನಾಗಿ ಮಾಡದೇ ತಾವೇ ಪಂಚಾಯ್ತಿ ವಿಭಾಗ ಪತ್ರ ಮಾಡಿಕೊಂಡಿದ್ದು ಸದರಿ ವಿಭಾಗ ಪತ್ರ 2ನೇ ಪ್ರತಿವಾದಿಗೆ ಬಂಧನಕಾರಿ ಆಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.2 ಪಂಚಾಯ್ತಿ ವಿಭಾಗ ಪತ್ರ ಸಂಂಬಧಪಟ್ಟ ಇಲಾಖೆಯಲ್ಲಿ ನೊಂದಾವಣೆಯಾಗದೇ ಇರುವುದರಿಂದ ಸದರಿ ದಾಖಲೆಯು

ಕಾನೂನಿನಡಿಯಲ್ಲಿ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳು ಕಾನೂನಿನ್ವಯ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಗರಸಭೆ ಕಚೇರಿಯಲ್ಲಿ ಖಾತೆ ಬದಲಾವಣೆ ಮಾಡಲು ಹೋದಾಗ ನೊಂದಾಯಿತ ವಿಭಾಗ ಪತ್ರವನ್ನು ಹಾಜರುಮಾಡಿ ಅನಂತರ ಖಾತೆ ಬದಲಾಯಿಸಿಕೊಳ್ಳಿ ಎಂದು ಹೇಳಿದ್ದಕ್ಕೆ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.2 ದಾಖಲೆಯ ಮೇಲೆ ತಾವು ದಾವಾ ಆಸ್ತಿಯ ಹಕ್ಕು ಘೋಷಣೆ ಕೋರಿ ದಾವೆ ತಂದಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಸ್ವತ್ತಿನ ಷೆಡ್ಯೂಲ್ ನಿ.ಪಿ.2 ವಿಭಾಗ ಪತ್ರದಂತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದಾರೆ ಎಂದರೆ ಸಾಕ್ಷಿಯು ಅಡ್ಡಿಪಡಿಸಿಲ್ಲ, ಮುಂದೆ ಅಡ್ಡಿಪಡಿಸದಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. 2ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ವಾಸ ಇದ್ದು ಅವರು ಯಾವುದೇ ದಾವಾ ಸ್ವತ್ತಿಗೆ ಬಂದಿಲ್ಲ, ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ ಬೇರೆ ಯಾವ ಆಸ್ತಿ ಇಲ್ಲ ಎಂದು ದಾವಾ ಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚನ್ನಪಟ್ಟಣ ಸಿಎಂಸಿ ವ್ಯಾಪ್ತಿಯ ಖಾತಾ ನಂಬರ್.388, 60X40 ವಿಸ್ತೀರ್ಣದ ನಿವೇಶನ ಹೊಂದಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಇದ್ದು, ಆ ಆಸ್ತಿಯನ್ನು ನನ್ನ ತಂದೆ ನನಗೆ ಮತ್ತು 1ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ನಿವೇಶನದಲ್ಲಿ ಮನೆ ಕಟ್ಟಿಕೊಂಡು ನಾನು ವಾಸ ಇದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ